ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-8 Issue-1, July-August 2026, Pp. 121-131**
**©*IIMRD*, Mysuru**
IIMRD JOURNALS

**www.iimrd.com**

# ಶಾತವಾಹನರ ಮೂಲ ಸ್ಥಳ ಯಾವುದು?

**ಡಾ. ಕೆ. ಖಾದರ್ ಭಾಷ**

ಕನ್ನಡ ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ತುರುವಿಹಾಳ ತಾ: ಸಿಂಧನೂರು

**ಸಾರಾಂಶ: (Abstract)**

*"ಸ್ಥಳೀಯ ಇತಿಹಾಸವೇ ಜಾಗತಿಕ ಇತಿಹಾಸ" ಎನ್ನುವ ವ್ಯಾಖ್ಯೆ ಮಹತ್ವದ್ದಾಗಿದೆ. ಮಾನವ ಜನಾಂಗದ ವಿಕಾಸ ಮತ್ತು ಇತಿಹಾಸವನ್ನು ಸ್ಥೂಲವಾಗಿ ಅರ್ಥೈಸಿಕೊಳ್ಳುವುದಕ್ಕಿಂತ ಅವನ ವಿಕಾಸವನ್ನು ಸೂಕ್ಷ್ಮ ವಿಚಾರಗಳಿಂದ ಮತ್ತು ಸ್ಥಳೀಯತೆಯಿಂದ ಸಂಶೋಧಿಸಿದಾಗ ಹೆಚ್ಚಿನ ಅಂಶಗಳು ಬೆಳಕಿಗೆ ಬರುತ್ತವೆ. ಭಾರತದ ಇತಿಹಾಸವನ್ನು ಕುರಿತು ಇಲ್ಲಿಯವರೆಗೆ ಅನೇಕ ಸಂಶೋಧನೆಗಳು ನಡೆದಿವೆ ಮತ್ತು ನಡೆಯುತ್ತಲಿವೆ, ಆದರೆ ಅನೇಕ ವಿಷಯಗಳ ಕುರಿತು ಇಂದಿಗೂ ವಾದ ವಿವಾದಗಳಿಂದ, ತಾತ್ವಿಕ ಸಂಘರ್ಷಗಳಿಂದ ಕೂಡಿವೆ. ಅಂತಹ ಅಂಶಗಳಲ್ಲಿ ಒಂದಾದ "ಶಾತವಾಹನರ ಮೂಲ ಸ್ಥಳ ಯಾವುದು" ಎನ್ನುವ ಈ ಅಂಶದ ಬಗ್ಗೆಯೂ ಇನ್ನೂ ವಿದ್ವಾಂಸರಲ್ಲಿ ಗೊಂದಲಗಳಿವೆ. ಶಾತವಾಹನರು ಅಥವಾ ಸಾತವಾಹನರು ಮೌರ್ಯರ ಕಾಲದ ಸುವರ್ಣಗಿರಿಯ ಭಾಗದವರು ಎಂದು ಹಲವು ಆಧಾರಗಳಿಂದ ಈ ಲೇಖನದಲ್ಲಿ ನಿರೂಪಿಸಲಾಗಿದೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಶಾತವಾಹನರು, ಮೂಲ ಸ್ಥಳ, ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ.*

**ಪೀಠಿಕೆ**

ಭಾರತ ದೇಶ ವಿಭಿನ್ನವಾದ ಸಂಸ್ಕೃತಿಗಳಿಂದ, ಜಾತಿಗಳಿಂದ ಹಾಗೂ ಭಾಷೆಗಳಿಂದ ಕೂಡಿದ ರಾಷ್ಟ್ರ. ಇದರಲ್ಲಿ ದಕ್ಷಿಣ ಭಾರತದಲ್ಲಿ ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ಮತ್ತು ಕೇರಳ ರಾಜ್ಯಗಳು ಕ್ರಿಸ್ತಪೂರ್ವದಿಂದಲೂ ತಮ್ಮದೇ ಆದ ಕೆಲವು ವಿಶಿಷ್ಟಾಂಶಗಳನ್ನು ಒಳಗೊಂಡಿವೆ. ಆದಿಮಾನವನ ಅವಶೇಷಗಳು ಮುಖ್ಯವಾಗಿ ಕರ್ನಾಟಕ ಆಂಧ್ರ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಸಿಂಧುನಾಗರಿಕತೆಯ ಜನಾಂಗದವರು ದ್ರಾವಿಡರೇ ಎಂಬ ವಾದವು ಭಾಷೆಯಿಂದ ಬಲಗೊಂಡಿರುವ ಸನ್ನಿವೇಶದಲ್ಲಿ ಸಿಗುವ ಆಧಾರಗಳ ಮೇಲೆ ಹೆಚ್ಚಿನ ಬಾಧ್ಯತೆ ಇರುತ್ತದೆ. ಶಾತವಾಹನರ ಅಥವಾ ಸಾತವಾಹನರ ಯಾವ ಸ್ಥಳವದವರೆಂಬುದು ಭಿನ್ನ ವಾದಗಳಿಂದ ಕೂಡಿದ್ದು ಅದಕ್ಕೆ ಅವರು ಮೌರ್ಯರ ಕಾಲದ ಸುವರ್ಣಗಿರಿಯ ಭಾಗದವರು ಎಂದು ಹಲವು ಆಧಾರಗಳಿಂದ ಇಲ್ಲಿ ನಿರೂಪಿಸಲಾಗಿದೆ.

***Please cite this article as**: ಖಾದರ್ ಭಾಷ, ಕೆ. (2026). ಶಾತವಾಹನರ ಮೂಲ ಸ್ಥಳ ಯಾವುದು?. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 121–131

**ಶಾತವಾಹನರ ಮೂಲ ಸ್ಥಳ**

ಈ ದಖ್ಖನ್ ಪ್ರದೇಶದ ರಾಜಕೀಯ ಇತಿಹಾಸವನ್ನು ಮೌರ್ಯರ ಆಳ್ವಕೆಯಿಂದ ನಾವು ಶಾಸನಾಧಾರಗಳಿಂದ ನಿರೂಪಿಸಬಹುದಾಗಿದೆ. ಮೌರ್ಯರ ಪತನದ ನಂತರ ಈ ಭಾಗವನ್ನು ಕ್ರಿ.ಪೂ 2ನೇ ಶತಮಾನದಿಂದ ಕ್ರಿ.ಶ 2ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ್ದು ಶಾತವಾಹನರು. ಇವರ ಮೂಲಸ್ಥಳದ ಬಗ್ಗೆ ವಿದ್ವಾಂಸರಲ್ಲಿ ಅನೇಕ ವಾದ ವಿವಾದಗಳಿವೆ. ಅವುಗಳಲ್ಲಿ

1. ಶಾತವಾಹನರು ಮಹಾರಾಷ್ಟ್ರದ ಮೂಲದವರು
2. ಶಾತವಾಹನರು ಆಂಧ್ರಪ್ರದೇಶದ ಮೂಲದವರು
3. ಶಾತವಾಹನರು ಕರ್ನಾಟಕ ಮೂಲದವರು

**1. ಶಾತವಾಹನರು ಮಹಾರಾಷ್ಟ್ರ ಮತ್ತು ವಿದರ್ಭ ಮೂಲದವರು**

ಶಾತವಾಹನರ ಮೂಲ ಸ್ಥಳದ ಬಗ್ಗೆ ಅನೇಕ ವಿದ್ವಾಂಸರಲ್ಲಿ ಭಿನ್ನಭಿಪ್ರಾಯಗಳಿದ್ದು ಈ ರಾಜವಂಶವನ್ನು ತಮ್ಮ ರಾಜ್ಯಕ್ಕೆ ಅದರಲ್ಲಿ ತಮ್ಮ ಸ್ಥಳಕ್ಕೆ ಸೇರಿಸಿಕೊಳ್ಳಬೇಕೆಂಬ ಹಂಬಲವು ಆಯಾ ಭಾಗದ ವಿದ್ವಾಂಸರಲ್ಲಿ ಕಾಣುತ್ತೇವೆ. **"**ಶಾತವಾಹನರ ಮೂಲ ಸ್ಥಳ ಮಹಾರಾಷ್ಟ್ರವೆಂದು ವಾದಿಸಿದ ವಿದ್ವಾಂಸರಲ್ಲಿ ಮುಖ್ಯವಾಗಿ ಪಿ.ಟಿ ಶ್ರೀನಿವಾಸ ಅಯ್ಯಂಗಾರ್, ಹೆಚ್.ಸಿ.ರಾಯ್ ಚೌಧರಿ, ವಿ.ವಿ.ಮಿರಾಷೆ ಮುಂತಾದವರು**"**[1] ಇವರು ಈ ಕೆಳಗಿನ ಅಂಶಗಳಿಂದ ತಮ್ಮವಾದವನ್ನು ಸಮರ್ಥಿಸಿಕೊಂಡಿದ್ದಾರೆ.

1. ಶಾತವಾಹನರ ಮೊದಲ ರಾಜಧಾನಿಯು **"**ಪ್ರತಿಷ್ಠಾನಪುರ**"**, ಇದು ಮಹಾರಾಷ್ಟ್ರ ರಾಜ್ಯದಲ್ಲಿ ಬರುವ ಇಂದಿನ ಔರಂಗಬಾದ್ ಜಿಲ್ಲೆಯಲ್ಲಿನ ಒಂದು ಪ್ರಸಿದ್ದವಾದ ಪ್ರದೇಶ. ಮೊದಲು ಶಾತವಾಹನರು ಇಲ್ಲಿಯೇ ರಾಜಧಾನಿಯನ್ನು ಮಾಡಿಕೊಂಡು ಆಳ್ವಿಕೆ ನಡೆಸಿರುವುದರಿಂದ ಇವರು ಈ ಭಾಗದವರಾಗಿಲು ಸಾಧ್ಯವೆಂದು ಈ ವಿದ್ವಾಂಸರ ಮೊದಲ ವಾದವಾಗಿದೆ.
2. ಮೊದಲನೆಯ ಶಾತಕರ್ಣಿಯ ಹೆಂಡತಿ ನಾಗಾನಿಕ ಹಾಕಿಸಿದ ನಾನಾಘಾಟ್ ಶಾಸನ, ಮತ್ತು ಶಾತವಾಹನರಲ್ಲಿ 23ನೇ ಪ್ರಸಿದ್ಧ ರಾಜನಾದ ಗೌತಮೀಪುತ್ರ ಶಾತಕರ್ಣಿಯು ಈತನ ತಾಯಿ ಗೌತಮೀ ಬಾಲಾಶ್ರೀ ಹಾಕಿಸಿದ ನಾಸಿಕ್ ಶಾಸನ ಈ ಎರಡೂ ಶಾಸನಗಳು ದೊರೆತಿರುವುದೂ ಮಹಾರಾಷ್ಟ್ರದಲ್ಲಿಯೇ ಆದ್ದರಿಂದ ಇವರು ಮೂಲತಃ ಮಹಾರಾಷ್ಟ್ರಿಗರೆಂಬ ವಾದ ಪಂಡಿತರದ್ದಾಗಿದೆ.
3. ಯಾವ ಶಾಸನಗಳಲ್ಲಿಯೂ ಮತ್ತು ನಾಣ್ಯಗಳಲ್ಲಿ ತೆಲುಗು ಮತ್ತು ಕನ್ನಡ ಭಾಷೆಗಳನ್ನು ಬಳಸದೆ ಇರುವುದು ಮತ್ತು ಕೇವಲ ಪ್ರಾಕೃತ ಮರಾಠಿಯ ಭಾಷೆಯನ್ನು ಬಳಸಿದ್ದರಿಂದ ಇವರು ಮಹಾರಾಷ್ಟ್ರದವರೆಂದು ವಾದಿಸಿದ್ದಾರೆ.
4. ಶಾತವಾಹನರ 4 ಶತಮಾನಗಳ ಕಾಲಗಳ ಆಳ್ವಿಕೆ ಮಾಡಿದ್ದು ಒಟ್ಟು 30 ರಾಜರು ಆಡಳಿತ ಮಾಡಿದ್ದಾರೆ ಅವರ ಹೆಸರನೇಳುವ ಪುರಾಣಗಳು ಶಾತವಾಹನರೆಂದು ಮತ್ತು ಆಂಧ್ರಭೃತ್ಯರೆಂದು ಸೂಚಿಸಿದೆ. ಇಲ್ಲಿ ಕನ್ನಡ ಮತ್ತು ತೆಲುಗು ಅಥವಾ ಕರ್ನಾಟಕ ಆಂಧ್ರಪ್ರದೇಶವೆಂದು ಎಲ್ಲಿಯೂ ಬಳಸಿಲ್ಲ ಆದ್ದರಿಂದ ಇವರು ಮಹಾರಾಷ್ಟ್ರದವರೆಂದು ವಾದಿಸುತ್ತಾ ಈ ಮೇಲಿನ ಪ್ರಮುಖ ಅಂಶಗಳಿಂದ ಅವರು ಮಹಾರಾಷ್ಟ್ರದವರೆಂದು ಸ್ಪಷ್ಟೀಕರಿಸಿದ್ದಾರೆ.

ಆದರೆ ಇವರು ನೀಡಿದ ಆಧಾರಗಳಿಂದ ತೃಪ್ತರಾಗದ ಆಂಧ್ರಪರ ವಿದ್ವಾಂಸರು ಈ ಕೆಳಗಿನ ಅಂಶಗಳನ್ನು ಬೆಳಕಿಗೆ ತಂದು ತಮ್ಮ ವಾದವನ್ನು ಮಂಡಿಸಿದ್ದಾರೆ.

**2.ಶಾತವಾಹನರು ಆಂಧ್ರ ಪ್ರದೇಶದ ಮೂಲದವರು**

ಮಹಾರಾಷ್ಟ್ರ ಪರವಾಗಿ ವಾದಿಸಿದ ಪಂಡಿತರ ವಾದನೆಯಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಲೋಪಗಳಿರುವುದನ್ನು ಗಮನಿಸಿದ "ಆಂಧ್ರಪರ ವಿದ್ವಾಂಸರು ವಿನ್ಸೆಂಟ್ ಸ್ಮಿತ್, ಇ.ಜೆ.ರಾಫ್ಸನ್, ಎಲ್.ಡಿ.ಬಾರ್ನೆಟ್, ಆರ್.ಜಿ.ಭಂಢಾರ್ಕರ್, ಎಂ.ಎಸ್ ವರ್ಮ, ಮಾರೆಮಂಡ ರಾಮಾರಾವು, ಗುತ್ತಿ ವೆಂಕಟರಾವು ಮುಂತಾದರು ಶಾತವಾಹನರು ಆಂಧ್ರಮೂಲದವರೆಂದು ವಾದಿಸಿ ಬಳ್ಳಾರಿ ಪ್ರದೇಶದವರಿರಬಹುದೆಂದು"[2] ಈ ಕೆಳಗಿನ ಆಧಾರಗಳನ್ನು ನೀಡಿದ್ದಾರೆ.

1. ನಾನಾಘಟ್ ಮತ್ತು ನಾಸಿಕ್ ಶಾಸನಗಳನ್ನು ಮಹಾರಾಷ್ಟ್ರದಲ್ಲಿ ಬಿಟ್ಟರೆ ಉಳಿದ ಶಾಸನಗಳನ್ನು, ನಾಣ್ಯಗಳನ್ನು ಹೆಚ್ಚಾಗಿ ಕಾಣುವಂತಾದ್ದು ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಕೋಟಿಲಿಂಗಾಲ ಹತ್ತಿರ ಆದ್ದರಿಂದ ಇವರು ಆಂಧ್ರಮೂಲದವರೆಂದು ಈ ಭಾಗದ ವಿದ್ವಾಂಸರ ಅಭಿಪ್ರಾಯವಾಗಿದೆ.
2. ಶಾತವಾಹನರ ಕಾಲದ ಪ್ರಸಿದ್ಧ ವಾಣಿಜ್ಯ, ವ್ಯಾಪಾರ ವಹಿವಾಟುಗಳು ಇವರ ಕಾಲದಲ್ಲಿ ನಡೆದ ವಿಚಾರವು ನಮಗೆ ಕೊಂಡಾಪೂರ್, ಪೆದ್ದಬಂಕೂರ್, ಧೂಳಿಕೋಟ ಮೊದಲಾದ ಪ್ರದೇಶದಲ್ಲಿ ದೊರೆತ ಅಸಂಖ್ಯಾತ ಶಾಸನ ಮತ್ತು ನಾಣ್ಯಗಳೇ ಸಾಕ್ಷಿಯಾಗಿರುವುದರಿಂದ ಈ ಅಂಶಗಳನ್ನಿಟ್ಟುಕೊಂಡು ಆಂಧ್ರ ಮೂಲದವರೆಂಬ ವಾದಕ್ಕೆ ಬೆಂಬಲ ದೊರೆತಂತಾಯಿತು.
3. ಮೊದಲು ಇವರು ರಾಜಧಾನಿಯಾಗಿ ಪ್ರತಿಷ್ಠಾನಪುರವನ್ನು ಆಯ್ಕೆ ಮಾಡಿಕೊಳ್ಳಲು ಪ್ರಧಾನ ಕಾರಣವೇನೆಂದರೆ ರಾಜ್ಯವನ್ನು ವಿದೇಶಿಯರ ದಾಳಿಯಿಂದ ರಕ್ಷಿಸಿಕೊಳ್ಳಲು, ದಾಳಿಯನ್ನು ಎದುರಿಸಿದ ನಂತರ ತಮ್ಮ ರಾಜಧಾನಿಯನ್ನು ಪೂರ್ವದಖ್ಖಿನ್ ಅಥವಾ ಆಂಧ್ರದ ಧ್ಯಾನಕಟಕಕ್ಕೆ (ಅಮರಾವತಿ) ಬದಲಾಯಿಸಿದ್ದರಿಂದ ಅವರು ಆಂಧ್ರದವರೆ ಎನ್ನುವುದರಲ್ಲಿ ಸಂದೇಹವಿಲ್ಲವೆಂದು ಇವರು ವಾದಿಸಿದ್ದಾರೆ.

**3.ಶಾತವಾಹನರು ಕರ್ನಾಟಕ ಮೂಲದವರು :**

ಮೇಲಿನ ಎರಡು ವಾದಗಳನ್ನು ಅವಲೋಕಿಸಿದ ನಂತರ ಶಾತವಾಹನರು ಕರ್ನಾಟಕದ ಮೂಲದವರೆಂದು ಅದರಲ್ಲಿ ಬಳ್ಳಾರಿ ಮೂಲದವರೆಂದು ಅಭಿಪ್ರಾಯ ಮಂಡಿಸಿದ ವಿದ್ವಾಂಸರಲ್ಲಿ ಪ್ರಮುಖರಾದವರು ಒಬ್ಬರೇ ಅವರು ಖ್ಯಾತ ಇತಿಹಾಸ ತಜ್ಞರಾದ ಎಂ.ಎಸ್. ಸುಕ್ತಾಂಕರ್‌ರು. "ಶಾತವಾಹನರ ಜನ್ಮಸ್ಥಾನವು ಮೊದಲಲ್ಲಿ ಮಹಾರಾಷ್ಟ್ರ ದೇಶವಾಗಲಿ ಅಥವ ಬಳ್ಳಾರಿಯ ಒಂದು ಮಂಡಲವಾದರು ಆಗಿರಬೇಕು"[3] ಇವರು ತಮ್ಮ ವಾದದಲ್ಲಿ ಈ ಕೆಳಗಿನ ಅಂಶಗಳನ್ನು ಅವಲೋಕಿಸಿ ಅದಕ್ಕೆ ಈ ಕೆಳಗಿನ ಆಧಾರಗಳನ್ನು ಸೂಚಿಸಿದ್ದಾರೆ. ಅವು ಇಂತಿವೆ.

1. ಶಾತವಾಹನರ ಕೊನೆಯ ರಾಜ 3ನೇ ಪುಲುಮಾವಿ ಮತ್ತು ಅವನ ಸೇನಾಪತಿಯಾದ ಸ್ಕಂದನಾಗನು ಹಾಕಿಸಿದ ಇಂದಿನ ಕರ್ನೂಲು ಜಿಲ್ಲೆಯ ಹಿಂದಿನ ಬಳ್ಳಾರಿ ಜಿಲ್ಲೆಯಲ್ಲಿನ ಮ್ಯಾಕದೋಣಿ ಶಾಸನ ಮತ್ತು

ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಶಾಸನಗಳು ಇವನ್ನು ಗಮನಿಸಿದಾಗ ಇವರು ಇದೇ ಭಾಗಕ್ಕೆ ಸಂಬಂಧಿಸಿದವರಾಗಿರಬೇಕು.

2. ಬಳ್ಳಾರಿ, ಅನಂತಪುರ ಮತ್ತು ಕರ್ನೂಲು ಜಿಲ್ಲೆಯ ಕೆಲವು ಭಾಗಗಳನ್ನು ಒಳಗೊಂಡ ಪ್ರಾದೇಶಿಕ ವಿಭಾಗಕ್ಕೆ ಇರುವ ಪ್ರಾಚೀನ ಹೆಸರು "ಶಾತವಾಹನಾ ವಿಹಾರಿ" ಅಥವಾ "ಶಾತವಾಹನಿರಟ್ಟ" ಇದು ಶಾತವಾಹನರ ಪ್ರಸಿದ್ಧ ದುರ್ಗವಾಗಿತ್ತು. ಆದ್ದರಿಂದ ಇವರು ಇದೇ ಭಾಗದವರು.

ಈ ಆಧಾರಗಳನ್ನು ದೊರೆಕಿಸಿ ತನ್ನ ವಾದವನ್ನು ಮಂಡಿಸಿದ ಆದರೆ ಅನೇಕ ಮಂದಿ ಇದನ್ನು ಈ ಕೆಳಗಿನಂತೆ ವಿಮರ್ಶಿಸಿದ್ದಾರೆ.

1. ಕೊನೆಯ ರಾಜನಿಗೆ ಮತ್ತು ಆರಂಭಕರ್ತನಿಗೆ ಸು 400 ವರ್ಷಗಳ ಅಂತರವಿದ್ದು ವಂಶಸ್ಥಾಪಕನಾದ ಶ್ರೀಮುಖನಿಗೆ ಸಂಬಂಧಿಸಿದ ಅಂಶಗಳು ಬಳ್ಳಾರಿ ಮತ್ತು ಕರ್ನಾಟಕದಲ್ಲಿ ದೊರೆತಿಲ್ಲವಾದ್ದರಿಂದ ಈ ವಾದವು ಸಮರ್ಥನೀಯವಲ್ಲ.
2. ಹಿರೇಹಡಗಲಿ ಶಾಸನವು ಸ್ಕಂದನಾಗವರ್ಮನ ಬಗ್ಗೆ ತಿಳಿಸುತ್ತದೆ ಹೊರೆತು ಪುಲುಮಾವಿಯನ್ನಲ್ಲ. ಆಗಲೇ ಅವನಿಂದ ಕಂಚಿಯ ಪಲ್ಲವರ ಆಳ್ವಿಕೆ ಪ್ರಾರಂಭವಾಗಿತ್ತು.
3. ಶಾತವಾಹನ ಎಂಬ ನಾಮವಿದ್ದಾಕ್ಷಣ ಆ ಪ್ರಾಂತ್ಯವೆಲ್ಲವು ಅದೇ ವಂಶಸ್ಥರದು ಎಂದೇಳಲು ಬರುವುದಿಲ್ಲ ಎಂದು ಎಂ.ಎಸ್.ಸುಕ್ತಂಕರ್ ರ ವಾದವು ಗಾಳಿವಾದವೆಂದು ಡಾ.ಗೋಪಾಲಾಚಾರಿ ಅವರು ತಳ್ಳಿ ಹಾಕಿದ್ದಾರೆ.

ಆದರೆ ಈ ಮೇಲಿನ ವಾದಗಳಲ್ಲಿ ಕೆಲವು ಅಂಶಗಳನ್ನು ಎಲ್ಲಾ ವಿದ್ವಾಂಸರು ಗಮನಹರಿಸದೇ ಹೋದುದು ವಿಷಾದನೀಯ ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಈ ಲೇಖನದಲ್ಲಿ ಮಂಡಿಸಲಾಗಿದೆ.

**ಸಾತವಾಹನರು ಸುವರ್ಣಗಿರಿಯ ಪ್ರದೇಶದವರೇ**

"ಸಂಶೋಧನೆ ನಿರಂತರ ಪ್ರಕ್ರಿಯೆ ಅದಕ್ಕೆ ನಿಲುಗಡೆಯಿಲ್ಲ" ಎಂಬ ಸೂತ್ರಕ್ಕೆ ಪೂರಕವಾಗಿ ನನ್ನ ಅಧ್ಯಯನದಲ್ಲಿ ಕಂಡುಕೊಂಡ ಅಂಶಗಳನ್ನು ಸ್ಪಷ್ಟೀಕರಿಸುತ್ತೇನೆ. ಒಂದು ರಾಜ ಕುಟುಂಬಕ್ಕೆ ಸಂಬಂಧಿಸಿದ ವಿಚಾರಗಳನ್ನು ಅಧ್ಯಯನ ಮಾಡುವಾಗ ಆ ವಂಶಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ತಿಳಿಯಬೇಕಾಗುತ್ತದೆ. ಒಂದು ರಾಜವಂಶದ ಸಂಪೂರ್ಣ ಮಾಹಿತಿಯನ್ನು ನಾವು ಅನೇಕ ಸಾಮಗ್ರಿಗಳಿಂದ ಅರಿಯುತ್ತೇವೆ, ಅವುಗಳಲ್ಲಿ ಮುಖ್ಯವಾಗಿ ನಡೆದ ಘಟನೆಯ ನಿಖರ ಮಾಹಿತಿಯನ್ನು ನೀಡುವಂತಹವುಗಳು ಶಾಸನಗಳು, ಅಂದಿನ ಆರ್ಥಿಕತೆಯನ್ನು ತಿಳಿಸುವ ನಾಣ್ಯಗಳು ಮತ್ತು ಸಮಾಜದ ವಿಭಿನ್ನ ಪರಿಸ್ಥಿತಿಗಳನ್ನು ತಿಳಿಸುವ ಸಾಹಿತ್ಯಕ ಕೃತಿಗಳು ಮತ್ತು ಸ್ಥಳೀಯತೆಗೆ ಒತ್ತು ಕೊಡುವ ರಾಜರ ಹಾಗೂ ಪ್ರಾದೇಶಿಕ ನಾಮವಾಚಕಗಳು ಮುಂತಾದ ಪರಿಕರಗಳನ್ನು ಸಂಪೂರ್ಣವಾಗಿ ಅವಲೋಕಿಸಿದಾಗ ದೊರೆತ ಅಂಶಗಳು ಈ ಕೆಳಗಿನಂತಿವೆ.

**ಅಶೋಕನ ಶಾಸನಗಳು**

ಅಶೋಕನು ತನ್ನ ಆಳ್ವಿಕೆಯಲ್ಲಿ ದಖ್ಖನ್ ಪ್ರದೇಶಕ್ಕೆ "ಸುವರ್ಣಗಿರಿ"ಯನ್ನು ಜನಪದವನ್ನಾಗಿ ಮಾಡಿ ಆಳ್ವಿಕೆಯನ್ನು ನಡೆಸಿದ ಬಗ್ಗೆ ಶಾಸನಾಧಾರಗಳಿಂದ ತಿಳಿಯಹುದು. ಆ ಸುವರ್ಣಗಿರಿಯ

ಇಂದಿನ ಕರ್ನೂಲು ಜಿಲ್ಲೆಯ ಪತ್ತಿಕೊಂಡ ತಾಲೂಕಿನ ಜೊನ್ನಗಿರಿಯೇ ಎಂದು ವಿದ್ವಾಂಸರೆಲ್ಲರೂ ಒಪ್ಪಿದ್ದಾರೆ. ಈ ಸುವರ್ಣಗಿರಿಯ ಹೆಸರಿಗೆ ತಕ್ಕಂತೆ ಇಂದಿಗೂ ಆ ಪ್ರದೇಶವು ಸಂಪದ್ಭರಿತವಾಗಿದೆ ಮತ್ತು ಹೆಚ್ಚಿನ ವಜ್ರಗಳು ದೊರೆಯುತ್ತಿರುವ ಪ್ರದೇಶವೂ ಹೌದು, ಈ ವಜ್ರಗಳಿಗಾಗಿ ಸ್ಥಳೀಯರು ಮತ್ತು ವಿದೇಶಿಯರೂ ಇಲ್ಲಿಗೆ ಬರುತ್ತಿರುವುದನ್ನು ಗಮನಿಸುತ್ತೇವೆ. ಅಷ್ಟೇ ಅಲ್ಲದೆ ಈ ಭಾಗವು ಬೆಟ್ಟ, ಗುಡ್ಡಗಳಿಂದಲೂ ಕೂಡಿತ್ತು ಆದ್ದರಿಂದ ತಾನು ಸ್ವೀಕರಿಸಿದ ಬೌದ್ಧ ಧರ್ಮದ ಪ್ರಚಾರದ ವ್ಯಾಪ್ತಿಗಾಗಿ ಈ ಭಾಗದಲ್ಲಿಯೇ ಅನೇಕ ಶಾಸನಗಳನ್ನು ಈ ಜನಪದದ ಸುತ್ತಲೂ ಹಾಕಿಸಿದ್ದಾನೆ. ಅದರಲ್ಲಿ ಸುವರ್ಣಗಿರಿಯ ಸಮೀಪದಲ್ಲಿ ಅಂದರೆ ಈಗಿನ ಕರ್ನೂಲು ಜಿಲ್ಲೆಯ ಪತ್ತಿಕೊಂಡ ತಾಲೂಕಿನ ಜೊನ್ನಗಿರಿಯ ಹತ್ತಿರದ ಎರ್ರಗುಡಿ ಗ್ರಾಮದ ಬೆಟ್ಟದ ಮೇಲೆ 16 ಶಿಲಾಶಾಸನಗಳನ್ನು ಹಾಕಿಸಿದ್ದಾನೆ. ಅಲ್ಲದೇ ಅಲ್ಲಿಂದ 100 ಕಿ.ಮೀ ಒಳಗೆ ಚಿತ್ರದುರ್ಗದ ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗರಾಮೇಶ್ವರ ಕೊಪ್ಪಳದ ಗವಿಮಠ ಮತ್ತು ಪಾಲ್ಕಿಗುಂಡು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ನಿಟ್ಟೂರು, ಉಡೆಗೊಳ, ರಾಯಚೂರಿನ ಮಸ್ಕಿ ಶಾಸನಗಳು ಇರುವುದನ್ನು ಪ್ರಮುಖವಾಗಿ ಗಮನಿಸಬಹುದು. ಈ ಪ್ರದೇಶಗಳು ಅಶೋಕನ ಕಾಲದಿಂದಲೂ ಪ್ರಸಿದ್ಧವನ್ನು ಪಡೆದಿದ್ದವು.

| | | | |
|---|---|---|---|
| **1. ಎರ್ರಗುಡಿ – ಜೊನ್ನಗಿರಿ** | **–** | **ಕರ್ನೂಲು ಜಿಲ್ಲೆ** | **– 16 ಶಾಸನಗಳು** |
| **2. ಬ್ರಹ್ಮಗಿರಿ** | **–** | **ಚಿತ್ರದುರ್ಗ ಜಿಲ್ಲೆ** | **– 1 ಶಾಸನ** |
| **3. ಸಿದ್ದಾಪುರ** | **–** | **ಚಿತ್ರದುರ್ಗ ಜಿಲ್ಲೆ** | **– 1 ಶಾಸನ** |
| **4. ಜಟಿಂಗ ರಾಮೇಶ್ವರ** | **–** | **ಚಿತ್ರದುರ್ಗ ಜಿಲ್ಲೆ** | **– 1 ಶಾಸನ** |
| **5. ಕೊಪ್ಪಳ ಗವಿಮಠ** | **–** | **ಕೊಪ್ಪಳ ಜಿಲ್ಲೆ** | **– 1 ಶಾಸನ** |
| **6. ಪಾಲ್ಕಿಗುಂಡು** | **–** | **ಕೊಪ್ಪಳ ಜಿಲ್ಲೆ** | **– 1 ಶಾಸನ** |
| **7. ಮಸ್ಕಿ** | **–** | **ರಾಯಚೂರು ಜಿಲ್ಲೆ** | **– 1 ಶಾಸನ** |
| **8. ನಿಟ್ಟೂರು** | **–** | **ಬಳ್ಳಾರಿ ಜಿಲ್ಲೆ** | **– 2 ಶಾಸನ** |
| **9. ಉಡೆಗೊಳ** | **–** | **ಬಳ್ಳಾರಿ ಜಿಲ್ಲೆ** | **– 2 ಶಾಸನ** |

ಈ ಶಾಸನಗಳೆಲ್ಲವೂ ಸುವರ್ಣಗಿರಿಗೆ 100 ರಿಂದ 200 ಕಿ.ಮೀ ಒಳಗೆ ಇರುವುದನ್ನು ಮತ್ತು ಈ ಜನಪದದ ವ್ಯಾಪ್ತಿಗೆ ಸೇರಿದ್ದನ್ನು ಗಮನಿಸಬೇಕು. ತದನಂತರ ಎರ್ರಗುಡಿಯ ಶಾಸನದ 13ನೇ ಶಾಸನದ 25, 26ನೇ ಪಾದದಲ್ಲಿ **"ಮಕಾ ನಾಮ ಅಲಿಕ ಸುದಲೆ ನಾಮ ನಿತಿಯಂ, ಚೋಡ ಪಾಂಡ್ಯ ಆತಂಬಪನಿಗೆ ಹೆಮೆವಹಿದ ಲಾಜ ವಿಸವಸಿ ಯೊನಕಂಭೊ ಚಸು ನಾಭಕ ನಾಭ ಪಂತಿಸು ಭೋಜ ಪಿತಿನಿಕೆಸು ಅಂಧಪಾಲದೆಸು ಸವತ"**[4] ಈ ಪಾದದಲ್ಲಿ ಬರುವ 'ಆಂಧ್ರ ರಾಜ್ಯದಲ್ಲಿನ ಪ್ರಜೆಗಳೆಲ್ಲರು ಧರ್ಮ ಮಾರ್ಗದಲ್ಲಿ ನಡೆಯುತ್ತಾ ಅಶೋಕನ ಆದೇಶಗಳನ್ನು ಪಾಲಿಸುತ್ತಿದ್ದರು' ಎನ್ನುವ ಅಂಶವನ್ನು ಗಮನಿಸಿದಾಗ ಆಂಧ್ರವೇ ಬೇರೆ ಹಾಗೆಯೇ ಮೌರ್ಯರ ಸಾಮಂತರಾದ ಶಾತವಾಹನರ ಆಳ್ವಿಕೆ ಪ್ರದೇಶ ಸುವರ್ಣಗಿರಿಯೇ ಬೇರೆ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲದಿದ್ದರೆ ಪ್ರತ್ಯೇಕವಾಗಿ ಆಂಧ್ರದ ಉಲ್ಲೇಖವನ್ನು ಮಾಡುತ್ತಿರಲಿಲ್ಲ.

ಇದೇ ಗ್ರಾಮದ ಎರಡನೆ ಶಾಸನದಲ್ಲಿ **"ಸವತಾ ವಿಜಿತಸಿ ದೇವಾನಂಪಿಯಸ ಪಿಯದಸನೆ ಲಾಜಿನೆಯ ಚ ಅಂತಾ ಅಥಾ ಚೋಢ ಪಾಂಡಿಯಾ ಸಾತಿಕಪುತೆ ತಂಬಪಂನಿ ಅಂತಿಯೋ"**[5] ಎನ್ನುವ ಪಾದದಲ್ಲಿನ ಸಾತಿಕಪುತೆ ಎನ್ನುವ ಪದವನ್ನು ಬಳಸಲಾಗಿದೆ ಈ ಪದವು ಶಾತವಾಹನ ವಂಶಕ್ಕೆ ಸಂಬಂಧಿಸಿರಬೇಕೆಂಬುದು ತಿಳಿದುಬರುತ್ತದೆ. ಆದರೆ ಕೆಲವರು ಇದು ಶಾಲಂಕಾಯನ ವಂಶವನ್ನು ತಿಳಿಸುತ್ತದೆ ಎಂದು ವಾದ ಮಂಡಿಸಿದವರು ಉಂಟೂ. ಆದರೆ ಇಲ್ಲಿ ಹೇಳಿರುವ ಚೋಡ, ಪಾಂಡ್ಯ ಎಂಬ ದಕ್ಷಿಣ ಭಾಗದ ರಾಜ್ಯಗಳಲ್ಲಿ ಸೇರಿಸಿರುವುದರಿಂದ ಅದೇ ಶಾತವಾಹನವೇ ಆಗಿರಬೇಕು ಬೇರೆಡೆ ಸಾತಿಕಪುತೆ ಎಂಬ ಈ ಹೆಸರಿನ ರಾಜ್ಯ ವಂಶವಿರುವುದು ದುಸಾಧ್ಯವಾದ ಅಂಶವಾಗಿದೆ. ಮತ್ತು ಅಶೋಕನ ಕಾಲದಲ್ಲಿ ಶಾಲಂಕಾಯನರು ಇದ್ದದ್ದು ಅಸಾಧ್ಯ ಅವರಾಳ್ವಿಕೆಯು ಕ್ರಿ.ಶ 4ನೇ ಶತಮಾನದಿಂದ ಆರಂಭವಾಗುತ್ತದೆ. ಈ ಪಾದದಿಂದ ಶಾತವಾಹನರು ಮೌರ್ಯರಿಗೆ ಸಾಮಂತರಾಗಿದ್ದುದು ಎಂಬುದು ಸ್ಪಷ್ಟವಾಗುತ್ತದೆ ಹಾಗೆಯೇ ಇವರು ಇದೇ ಪ್ರದೇಶದ ವ್ಯಾಪ್ತಿಯನ್ನು ಹೊಂದಿರಬೇಕೆಂಬುದು ಸತ್ಯವಾಗುತ್ತದೆ.

**3ನೇ ಪುಲುಮಾವಿಯ ಮ್ಯಾಕದೋನಿ ಶಾಸನ**

**'ಸಿದಂ ರಜೋ ಸಾತವಾಹನಾನಂ ಸಿರೀ ಪುಳೋಮಾವಿ ಸಸವಃ ಹೇಮ 2ದಿನ**

**ಮಸ ಮಹಾಸೇನಾಪತಿ ಸಖಂದ ನಾಕಸ ಜಸ ಪಾದೇ ಸಾತವಾಹ**

**ನಿ ಹರೇಗುಮಿಕಸ ಕುಮಾರ ದತ್ತುಸಾ ಮೇವೇಪುರಕೇ ವಥ**

**ಸೇನ ಗಹಪತಿಕೇನ ಕೊಂತನಾಂ [ಸಂಚೆಗ]ನ ತಳಾ ಕಂಖಾನಿತಂ'**[6]

ಈ ಶಾಸನವು ಕ್ರಿ.ಶ. 218ರಲ್ಲಿ ಶಾತವಾಹನ ರಾಜವಂಶದ ಕೊನೆಯ ರಾಜನಾದ 3ನೇ ಪುಲುಮಾವಿಯು ಪತನಾವಸ್ಥೆಯಲ್ಲಿದ್ದಾಗ ಇಂದಿನ ಕರ್ನೂಲು ಜಿಲ್ಲೆಯ ಆದವಾನಿ ತಾಲೂಕಿನ ಮ್ಯಾಕಡೋನಿ ಗ್ರಾಮದಲ್ಲಿ ಹಾಕಿಸಿದ್ದಾನೆ. ಇದರಲ್ಲಿ **'ಶಾತವಾಹನವಿಹಾರಿಯ'** ಅಧಿಕಾರಿಯಾಗಿ ತನ್ನ ಸೇನಾಪತಿಯದ ಸ್ಕಂದನಾಗನನ್ನು ನೇಮಿಸಿದ ಬಗ್ಗೆ ಉಲ್ಲೇಖಿಸಿದ್ದನ್ನು ಕಾಣಬಹುದು. ಇಲ್ಲಿಂದ ಸು. 8 ವರ್ಷಗಳ ಕಾಲ ಇವನು ಆಳ್ವಕೆ ನಡೆಸಿರುವುದು ಕಂಡುಬರುತ್ತದೆ. ಇವನು ಈ ಪ್ರದೇಶಕ್ಕೆ ಬರಲು ಪ್ರಧಾನ ಕಾರಣ ಪರಿಪಾಲನೆಯಲ್ಲಿಯೂ ಶಕ್ತಿ ಸಾಮರ್ಥ್ಯದಲ್ಲಿಯೂ ಸಮರ್ಥನಲ್ಲದ ಇವನನ್ನು ಖಾರವೇಲನು ಧ್ಯಾನಕಟಕದಿಂದ ಓಡಿಸಲ್ಪಟ್ಟಾಗ ತನ್ನ ವಂಶದ ಸ್ವಂತ ಸ್ಥಳವಾದ ಸಾತವಾಹನಿ ವಿಹಾರಿಗೆ ಆಗಮಿಸಿ ತನ್ನ ಸೇನಾಪತಿಯಾದ ಸ್ಕಂದನಾಗನಿಂದ ಏವಪುರದಲ್ಲಿ ಈ ಶಾಸನವನ್ನು ಹಾಕಿಸಿರಬೇಕು ಮತ್ತು ಇವನು ಇದೇ ಪ್ರದೇಶಕ್ಕೆ ಸಂಬಂಧಪಟ್ಟವನಾಗಿರಬೇಕು ಎಂದು ನಿಸ್ಸಂಶಯವಾದ ವಿಷಯ. ಆದರೆ ಕೆಲವರು ಅವನಿಗೆ ರಕ್ಷಣೆಯ ಪ್ರದೇಶವಾಗಿರಬೇಕು ಎಂಬ ಅಂಶವನ್ನು ಮೇಲಿತ್ತಿದ್ದಾರೆ ಅದು ಬಾಲಿಶವಾದ ವಾದವೆನಿಸುತ್ತದೆ. ಅಲ್ಲದೆ ಸ್ಕಂದವರ್ಮನು ಪುಲುಮಾವಿಯ ಪತನದ ನಂತರ ಬಳ್ಳಾರಿ ಜಿಲ್ಲೆಯ ಹಿರೇ ಹಡಗಲಿಯಲ್ಲಿ ತನ್ನ ಹೆಸರಿನಲ್ಲಿಯೇ ಶಾಸನವನ್ನು ಹಾಕಿಸಿದ್ದಾನೆಂದರೆ, ಇಲ್ಲಿಂದಲೆ ಅವನು ಕಂಚಿಯ ಪಲ್ಲವ ರಾಜ್ಯವನ್ನು ಕಟ್ಟಿ ಬೆಳೆಸಿರಬೇಕೆಂದು ಊಹಿಸಬಹುದಾಗಿದೆ. ಈ ಶಾಸನದಿಂದ

ಕಂಡುಬರುವ ಮತ್ತೊಂದು ಅಂಶವೆಂದರೆ ಕೊನೆಯ ಪಾದದಲ್ಲಿ ಬರುವ ಕೊಂತನಾಂತಳ ಎನ್ನುವ ಪದವು ಕುಂತಳವನ್ನೆ ಸೂಚಿಸುತ್ತಿರಬೇಕೆಂಬುದು ಗಮನಿಸಬೇಕಾದ ಅಂಶ.

ಹಾಗೆಯೇ ಕನ್ನಡದ ಮೊದಲ ಶಾಸನವಾದ ಹಲ್ಮಿಡಿ ಶಾಸನದಲ್ಲಿ ಬರುವ ಆರನೆ ಪಾದವು **"ಮಾ ದಕ್ಷಿಣಾಪಥ ಶತಹವನಾಹವದುಳ್"** ಎಂಬ ಶಬ್ದವು ಮುಖ್ಯವಾಗಿ ಅದು ಶಾತವಾಹನವಾಗಿರಬೇಕೆಂದು ಮತ್ತು ಶತಹವನಾ ಎಂಬ ಶಬ್ದವು ಕಂಡರಣಿಕಾರನ ಕಣ್ತಪ್ಪಿನಿಂದ ನಡೆದ ಘಟನೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ರಾಜವಂಶದ ನಂತರ ಮತ್ತೆ ದಕ್ಷಿಣಾಪಥವನ್ನು ಅಷ್ಟೇ ಸಮರ್ಥವಾಗಿ ಆಳ್ವಿಕೆ ನಡೆಸಿದ್ದು ಕದಂಬ ವಂಶಸ್ಥರೇ ಎಂಬುದು ಸ್ಪಷ್ಟವಾದ ಅಂಶ, ಇವರಿಗೆ ಶತೃಗಳೆಂದರೆ ಕೇಕೆಯ ಪಲ್ಲವರು ಅದಕ್ಕಾಗಿ ಅವರ ಜೊತೆ ಬಹಳಷ್ಟು ಯುದ್ದಗಳು 'ಶ್ರೀಗಿರಿ(ಶ್ರೀಶೈಲ)' ಪರ್ವತದಲ್ಲಿ ನಡೆದಿವೆ ಎಂದು ಶಾಸನಗಳು ನಿರೂಪಿಸುತ್ತವೆ.

## 2. ಆಂಧ್ರ ಪದದ ನಿಷ್ಪತ್ತಿ

ಶಾತವಾಹನರು ಆಂಧ್ರ ಮೂಲದವರು ಎನ್ನುವುದಕ್ಕೆ ವಿದ್ವಾಂಸರು ಸೂಚಿಸುವ ಪ್ರಧಾನ ಅಂಶವೇನೆಂದರೆ ಪುರಾಣಗಳಲ್ಲಿ ಶಾತವಾಹನರ ಕುರಿತು ಆಂಧ್ರಭೃತ್ಯರು ಎಂದು ಹೆಸರಿಸಿರುವುದರಿಂದ ಇವರು ಆಂಧ್ರದವರೆಂದು ಅವರು ವಾದಿಸಿದ್ದಾರೆ. ಆದರೆ ಅಂಧ್ರ  ಎನ್ನುವಂತಹ ಶಬ್ದವು ಜಾತಿ ವಾಚಕವೊ ಅಥವಾ ಪ್ರಾದೇಶಿಕ ನಾಮವೊ ಎಂಬ ವಾದ ನಡೆದಾಗ ಆಂಧ್ರ ಎಂಬುದು ಜಾತಿ ವಾಚಕವಾಗಿರುವುದು ಕಂಡು ಬರುತ್ತದೆ. ಇದನ್ನು ನಾವು ಐತರೇಯ ಬ್ರಾಹ್ಮಣದಿಂದ ಅರಿಬಹುದು, ಆದರೆ ಬಳ್ಳಾರಿ ಮತ್ತು ಕರ್ನೂಲು ಪ್ರದೇಶದಲ್ಲಿ ಇಂದಿಗೂ  ಹರಿಯುವ ಒಂದು ನದಿಯ ಹೆಸರು ಅಂದ್ರಿ ಆಥವಾ ಹಂದ್ರಿ ಎಂಬುದಾಗಿರುವುದರಿಂದ ಪುರಾಣಗಳು ಶಾತವಾಹನರನ್ನು ಆಂಧ್ರಭೃತ್ಯರೆಂದಿದೆ ಹೊರತು ಆಂಧ್ರರು ಎನ್ನುವ ಶಬ್ದ ಬಳಸಿಲ್ಲ. ಆದ ಕಾರಣ ಈ ನದಿಯ ಹೆಸರೆ  ಶಾತವಾಹನರನ್ನು ಕುರಿತು ಬಳಸಲಾಗಿದೆ ಆದಕಾರಣ ಆಂಧ್ರಭೃತ್ಯರೆಂದರೆ ಸಾತವಾಹನರು ಎಂಬುದು ಸ್ಪಷ್ಟ. ಮತ್ತು ನಾವು ಶಾತವಾಹನರ ಮೂಲ ಸ್ಥಾನವು ಹಂದ್ರಿ, ಅಂದ್ರಿಯೇವೆಂದು ಈ ನದಿಯ ದಂಡೆ ಮೇಲೆಯೆ ಶಾತವಾಹನರ ರಾಜವಂಶ ಉಗಮವಾಗಿರಬೇಕೆಂದು ಸ್ಪಷ್ಟವಾಗುತ್ತದೆ. ಇದಕ್ಕೆ ಪೂರಕವಾಗುವ ಹಾಗೆ ಖಾರವೇಲನ ಹಾತಿಗುಂಪ ಶಾಸನದಲ್ಲಿ ಕನ್ಹಾಸ್ ನದಿಯ ಮೇಲೆ ಮುಸಿಕ ನಗರ ಎಂಬ ವಾಕ್ಯದಲ್ಲಿ ಉಲ್ಲೇಖಗೊಂಡಿರುವುದು ಕೃಷ್ಣಾ ನದಿಯ ಮೇಲೆ ಇರುವ ಮಸ್ಕಿ ನಗರವನ್ನೆ ಸೂಚಿಸುತ್ತದೆ ಇಲ್ಲಿಯವರೆಗೆ ಖಾರವೇಲನು ದಂಡಯಾತ್ರೆ ಮಾಡಿದ್ದು ಇಲ್ಲಿಂದ ಕೆಳಗೆ ಹೋಗದಿರುವುದು ಅಲ್ಲಿ ಸಾತವಾಹನರು, ಪಲ್ಲವರು, ಕದಂಬರು ಸಮರ್ಥವಾಗಿರುವುದೇ ಪ್ರಧಾನ ಕಾರಣವಾಗಿದೆ.

## 3. ರಾಜರ ಹೆಸರುಗಳು:

ಶಾತವಾಹನ ರಾಜ್ಯ ಸ್ಥಾಪಕನಾದ ಸಿಮುಖ ಶಾತ ಮತ್ತು ಕುಂತಲ ಶಾತಕರ್ಣಿಯ ಹೆಸರುಗಳನ್ನು ಗಮನಿಸಿದಾಗ ಅವರು ಈಗಿನ ಕರ್ನಾಟಕ ಪ್ರದೇಶದವರೆಂದು ಸ್ಪಷ್ಟವಾಗುತ್ತದೆ. ಸಿಮುಖ ಎನ್ನುವವನ ನಾಣ್ಯಗಳು ಹೆಚ್ಚಾಗಿ ಕರೀಂನಗರ ಜಿಲ್ಲೆಯಲ್ಲಿ ದೊರೆತಿರುವುದರಿಂದ ಅವನು ಆಂಧ್ರದವನೆಂದು ಆಂಧ್ರಪರ ವಿದ್ವಾಂಸರು ವಾದಿಸಿದ್ದಾರೆ. ನಾಣ್ಯಗಳು ದೊರೆತಾಕ್ಷಣ ಅವನು ಅದೇ

ಭಾಗದವನು ಎನ್ನುವುದಕ್ಕೆ ಬರುವುದಿಲ್ಲ. ನಾಣ್ಯಗಳು ಇಂದಿಗೂ ಬೇರೆ ಬೇರೆ ಕಡೆ ಸಾಕಷ್ಟು ದೊರೆಯಬಹುದು ಅವನು ಅದೇ ಭಾಗದವನೆನ್ನುವುದಕ್ಕೆ ಈ ವಾದವು ಸರಿದೂಗದು. ಸಿಮುಖ ಶ್ರೀಮುಖನಾಗಿಯು ಬದಲಾಗುವ ಅವಕಾಶದ ಬಗ್ಗೆ ವಿದ್ವಾಂಸರು ಗಮನಹರಿಸದಿರುವುದು ಪಕ್ಷಪಾತ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಏಕೆಂದರೆ ಶಾತವಾಹನರ ಪ್ರಮುಖ ಶಾಸನವಾದ ನಾಸಿಕ ಶಾಸನದಲ್ಲಿ ಶಟಗಿರಿ ಎನ್ನುವ ಪದವನ್ನು ಬಳಸಿದ್ದು ಅದು ಶ್ರೀಗಿರಿ ಪರ್ವತವನ್ನು ಸೂಚಿಸುತ್ತದೆ ಇದು ಇಂದಿನ ಶ್ರೀಶೈಲವೇ. ಸಿಮುಖನು ಶ್ರೀಗಿರಿ ಪರ್ವತದ ಸಮೀಪದವನು ಅದಕ್ಕೆ ಅವನು ತನ್ನ ಹೆಸರನ್ನು ಸಿಮುಖನೆಂದು ಕರೆದುಕೊಂಡಿದ್ದಾನೆ. ಇವನಿಗೆ ಸಂಬಂಧಿಸಿದ ಯಾವುದೇ ಶಾಸನಗಳು, ನಾಣ್ಯಗಳು ಇಲ್ಲಿ ದೊರೆತಿಲ್ಲ ಆದ್ದರಿಂದ ಇವನು ಈ ಪ್ರದೇಶಕ್ಕೆ ಸಂಬಂಧಿಸಿಲ್ಲವೆಂಬುದು ವಿಮರ್ಶಕರ ವಾದ ಆದರೆ ಶಾಸನಗಳು ದೊರೆಯದಿದ್ದರೆ ಯಾವ ಭಾಗದಲ್ಲಿ ಶಾಸನ ದೊರೆತರೆ ಅದೇ ಪ್ರದೇಶದವನಾಗುತ್ತಾನೆಂದರೆ ಅಶೋಕನ ಶಾಸನಗಳು ದಖ್ಖನದಲ್ಲಿ ಹೆಚ್ಚಾಗಿ ದೊರೆತಿವೆ ಅವನು ಈ ಭಾಗದವನೋ, ಮೂರನೇ ಕೃಷ್ಣನ ಜೂರ ಪ್ರಶಸ್ತಿಯನ್ನು ಗಮನಿಸಿದರೆ ಅದು ದೊರೆತಿರುವುದು ಮಧ್ಯಪ್ರದೇಶದಲ್ಲಿ ಆದಕಾರಣ ಈ ವಾದವು ಜೊಳ್ಳೆನಿಸುತ್ತದೆ.

ಕ್ರಿ.ಪೂ. 38–30ರ ಮಧ್ಯದಲ್ಲಿ ಆಳ್ವಿಕೆ ನಡೆಸಿದ ಮತ್ತೊಬ್ಬ ಪ್ರಮುಖ ರಾಜ **'**ಕುಂತಲ ಶಾತಕರ್ಣಿ**'**ಯ ಹೆಸರಿಗೆ ಕುಂತಲ ಪದವು ಸೇರಿರುವುದನ್ನು ಮತ್ತು ಆ ಪದದ ಅರ್ಥವನ್ನು ಗಮನಿಸಿದಾಗ ನಮಗೆ ಇನ್ನೂ ಅನೇಕ ಹೊಸ ವಿಚಾರಗಳು ಗೋಚರಿಸುತ್ತವೆ. ಅವು ಈ ಕೆಳಗಿನಂತಿವೆ.

**4. ಕುಂತಲ ಪದ ನಿಷ್ಪತ್ತಿ.**

ಪ್ರಾಚೀನ ಕರ್ನಾಟಕದಲ್ಲಿ ಅತ್ಯಂತ ಸಂಪದ್ಭರಿತವಾದ, ಕೃಷ್ಣ, ತುಂಗೆ, ವೇದಾವತಿ (ಹಗರಿ), ಅಂದ್ರಿ ನದಿಗಳ ಹರಿಯುವಿಕೆಯಿಂದ ಅತ್ಯಂತ ಮನೋಹರವಾಗಿ ಬೆಟ್ಟ ಗುಡ್ಡಗಳಿಂದ ಕೂಡಿದ ಪ್ರದೇಶ ಇದಾಗಿದೆ. ಕುಂತಳ ಎನ್ನುವುದು ದ್ರಾವಿಡ ಶಬ್ದ ಇದು ಕೂಂದಲ್ ಎನ್ನುವ ಶಬ್ದದಿಂದ ಉದ್ಭವಿಸಿದೆ. ಹಾಗೆಯೇ ಕನ್ನಡದ ಪ್ರಮುಖ ಸಂಶೋಧಕರು, ಕಾದಂಬರಿಕಾರರು, ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ.ಶಿವರಾಮ ಕಾರಂತರು ತಮ್ಮ ಸಿರಿಗನ್ನಡ ಅರ್ಥಕೋಶ ಎಂಬ ನಿಘಂಟುವಿನಲ್ಲಿ ಕುಂತಲ ಎಂಬ ಪದದ ಅರ್ಥವನ್ನು ಈ ರೀತಿಯಾಗಿ ಸೂಚಿಸಿದ್ದಾರೆ. **"ಈಗಣ ಆದವಾನಿ ಸಮೀಪದ ಪ್ರಾಚೀನ ಕಾಲದ ಒಂದು ದೇಶ, ದಖ್ಖಣದ ಒಂದು ಪ್ರದೇಶ ಮತ್ತು ಈಗಣ ಆದವಾನಿ ಪ್ರಾಂತ್ಯ"** ಎಂದು ತಿಳಿಸಿದ್ದಾರೆ. ಹಾಗೆಯೆ ಕರ್ನಾಟಕ ಇತಿಹಾಸ ದರ್ಶನದಲ್ಲಿ ಕುಂತಲ ಪದಕ್ಕೆ **"ಪಶ್ಚಿಮ ಸಮುದ್ರ, ವೆಂಗುರ್ತಿ, ಶಿವಮೊಗ್ಗ, ಬಾದಾಮಿ, ಶ್ರೀಶೈಲಗಳಿಂದ ಆವೃತವಾದುದು"** ಎಂದು ವಿವರಿಸಲಾಗಿದೆ.

ಈ ಮೇಲಿನ ಎರಡು ಅಂಶಗಳನ್ನು ಗಮನಿಸಿದಾಗ ಕ್ರಿ.ಪೂ.ದಿಂದಲೆ ಸುವರ್ಣಗಿರಿಯ ಪ್ರಾಂತ್ಯವು ಮುಂದೆ ಕುಂತಲ ಸೀಮೆಯಾಗಿ ಬದಲಾಗಿರಬಹುದು. ಈ ಸೀಮೆಯಲ್ಲಿಯೇ ಮುಂದೆ ನೊಳಂಬವಾಡಿ 32 ಸಾವಿರ ಅದರ ಉಪ ವಿಭಾಗವಾದ ಸಿಂಧವಾಡ ಸಾಸಿರವು ಈ ಸುವರ್ಣಗಿರಿಯನ್ನು ಒಳಗೊಂಡಿದೆ. ಸುವರ್ಣಗಿರಿಯನ್ನು ಒಳಗೊಂಡಂತೆ ಮೇಲಿನ ಪ್ರಾಂತ್ಯಗಳನ್ನು ಮತ್ತೆ ಇನ್ನು ಹಲವು ಪ್ರದೇಶಗಳನ್ನು ಸೇರಿಸಿಕೊಂಡು ಕುಂತಲ ಪ್ರಾಂತ್ಯವು ವಿಸ್ತರಿಸಿದೆ. ಆ ಸೀಮೆಯು

ಶಾತವಾಹನರ ಮೂಲ ಪ್ರದೇಶವಾಗಿರುವುದರಿಂದಲೆ ಶಾತಕರ್ಣಿಯು ಕುಂತಲ ಪದವನ್ನು ತನ್ನ ಹೆಸರಿಗೆ ಸೇರಿಸಿಕೊಂಡಿದ್ದಾನೆ. ಹಾಗೆಯೇ **'ಕುಂತಲ ಜನಪದೇಶ್ವರ'** ಎಂಬ ಬಿರುದು ಈ ಚಕ್ರವರ್ತಿಗಳಿಗೆ ಇರುವುದನ್ನು ಗಮನಿಸಬಹುದು.

ಹಾಲನು (ಶಾತವಾಹನರ 17 ನೇ ರಾಜ) ತನ್ನ ಕೃತಿಯಾದ **"ಗಾಥಾಸಪ್ತಸತಿ"**ಯಲ್ಲಿ ಕನ್ನಡದ ಅನೇಕ ಶಬ್ದಗಳನ್ನು ಬಳಸಿದ್ದಾನೆ ಅವುಗಳಲ್ಲಿ ಪೊಟ್ಟೆ, ಪೆಟ್ಟು, ತೀರ್ ಮತ್ತು ಅತ್ತಾ ಶಬ್ದಗಳು ಪ್ರಮುಖವಾದವು. ಈ ಪದಗಳು ಇವರ ರಾಜ್ಯಭಾಷೆ ಪ್ರಾಕೃತವಾದರೂ ಅಲ್ಲಲ್ಲಿ ಕನ್ನಡ ಶಬ್ದಗಳ ಬಳಕೆ ಕಂಡಾಗ ಇವರ ಮೇಲೆ ಕನ್ನಡಿಗರ ಪ್ರಭಾವ ಹೆಚ್ಚಾಗಿರುವುದು ಮತ್ತು ಇವರ ಇದೇ ಭಾಗದವರೆಂದು ಹೇಳುವುದರಲ್ಲಿ ಸಂದೇಹವಿಲ್ಲ.

**ಈ ಮೇಲಿನ ಅಂಶಗಳೊಂದೆ ಅಲ್ಲದೆ ಇನ್ನೂ ಕೆಲವು ಅಂಶಗಳನ್ನು ಗಮನಿಸಿದಾಗ ಹೆಚ್ಚಿನ ಮಾಹಿತಿ ದೊರೆಯುತ್ತದೆ.**

ಈ ಭಾಗದಲ್ಲಿ ದೊರೆತ ಶಾತವಾಹನ ನಾಮವಿರುವ ಕೆಲವು ಹೆಸರುಗಳು

ಸಾತಾನಿಕೋಟ– ಸಾತವಾಹುನಿಕೋಟ– ನಂದಿಕೊಟ್ಕೂರು ತಾಲೂಕು, ಕರ್ನೂಲು ಜಿಲ್ಲೆ

ಸತ್ತೆನಪಲ್ಲಿ – ಗುಂಟೂರು ಜಿಲ್ಲೆ,

ಸಾತನೂರು – ಆದೋನಿ (ತಾ) ಈಗಿನ ಮಂತ್ರಾಲಯ ತಾಲೂಕ ಕರ್ನೂಲು ಜಿಲ್ಲೆ

1.**ಸಾತಾನಿಕೋಟ – ಸಾತವಾಹುನಿಕೋಟ –** ಕರ್ನೂಲು ಜಿಲ್ಲೆಯ ನಂದಿಕೊಟ್ಕೂರು ತಾಲೂಕಿನ ಒಂದು ಗ್ರಾಮ ಇದು ಶಾತವಾಹನರ ಪ್ರಮುಖ ದುರ್ಗವಾಗಿತ್ತು ಹಾಗೆಯೇ **'ಸಾತನೂರು'** – ಆದೋನಿ (ತಾ) ಈಗಿನ ಮಂತ್ರಾಲಯ ತಾಲೂಕ ಕರ್ನೂಲು ಜಿಲ್ಲೆಯಲ್ಲಿದ್ದು ಪುರಾತನ ಗ್ರಾಮವಾಗಿದ್ದು ಇಲ್ಲಿ ಅನೇಕ ಪ್ರಾಚೀನ ದೇವಾಲಯಗಳನ್ನು ಕಾಣಬಹುದು, ಈ ಗ್ರಾಮವು ತುಂಗಭದ್ರಾ ನದಿಯ ದಡದ ಮೇಲಿದೆ. ಈ ಗ್ರಾಮದ ಉಲ್ಲೇಖವನ್ನು ಕರ್ನೂಲು ಜಿಲ್ಲೆಯ ಆದವಾನಿ ತಾಲೂಕಿನ ಕ್ರಿ.ಶ 1534ರ ಭಟ್ಟರ ಬೊಮ್ಮಲಾಪುರ ಗ್ರಾಮದ ವಿಜಯನಗರ ಅರಸ ಅಚ್ಯುತದೇವರಾಯರು ವಿದ್ಯಾನಗರ ನೆಲೆವೀಡಿನಲ್ಲಿದ್ದಾಗ ಹಾಕಿಸಿದ ಶಾಸನದಲ್ಲಿ **"ಆದವಾನಿ ರಾಜ್ಯಕ್ಕೆ ಸಲುವ ಸಾತನೂರು ಸೀಮೆಯೊಳಗಣ ತುಂಗಭದ್ರಾತೀರದ ಬೊಂಮಲಾಪುರವೆಂಬ ಗ್ರಾಮವನ್ನು"**[7] ಎಂಬ ಪಾದವು ಅಂದು ಪ್ರಸಿದ್ದವಾದ ಸಾತನೂರು ಸೀಮೆಯನ್ನು ಸೂಚಿಸುತ್ತಾ ಆ ಗ್ರಾಮದ ಐತಿಹಾಸಿಕತೆಯನ್ನು ತಿಳಿಸಿಕೊಡುತ್ತದೆ.

2. ಈ ಭಾಗದಲ್ಲಿ ಪ್ರಾಚೀನ ಶಿಲಾಯುಗದ ಅವಶೇಷಗಳು ಬಳ್ಳಾರಿಯ ಸಂಗನಕಲ್ಲು, ಸಿಂಧವಾಳ, ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ, ನಿಟ್ಟೂರು ಮತ್ತು ಆದವಾನಿಯ ರಣಮಂಡಲ ಬೆಟ್ಟದ ಮೇಲಿನ ಚಿತ್ರಗಳು ಆದಿಮಾನವನ ವಾಸಸ್ಥಾನಗಳಾಗಿದ್ದುವೆಂಬುದು ತಿಳಿದುಬರುತ್ತದೆ. ಈ ಪ್ರದೇಶದಲ್ಲಿಯೇ ಹೆಚ್ಚಾಗಿ ತುಂಗಭದ್ರಾನದಿಯು ಸುತ್ತುವರೆದು ಹರಿಯುತ್ತದೆ ಹಾಗೆಯೇ ವೇದಾವತಿ, ಹಂದ್ರಿ ನದಿಯು ಸಹಿತ ಈ ಭಾಗದಲ್ಲಿ ಹರಿಯುವುದರಿಂದ ಈ ಭಾಗವು ಜನವಾಸಕ್ಕೆ ಯೋಗ್ಯವಾಗಿತ್ತೆಂಬುದರಲ್ಲಿ ಸಂಶಯವಿಲ್ಲ.

3. ಕರ್ನೂಲು, ಬಳ್ಳಾರಿ, ಅನಂತಪುರ ಪ್ರದೇಶಗಳ ರಾಜಕೀಯ ಇತಿಹಾಸವನ್ನು ಗಮನಿಸಿದಾಗ ಈ ಪ್ರದೇಶಗಳೆಲ್ಲವೂ ಕ್ರಿ.ಶ 6 &7 ನೇಶತಮಾನಕ್ಕಾಗಲೇ ನೊಳಂಬವಾಡಿ–32000 ದ ಸಿಂಧವಾಡಿ ಪ್ರದೇಶ ವ್ಯಾಪ್ತಿಗೆ ಸೇರಿದ್ದವು. ಅದಕ್ಕೆ ಇಂದಿನ ಈ ಭಾಗವನ್ನು ಗಮನಿಸಿದರೆ ಬೆಟ್ಟ, ಗುಡ್ಡ, ನದಿ, ವಿಭಿನ್ನ ಮಣ್ಣಿನ ಪ್ರಕಾರಗಳನ್ನು ಹೊಂದಿದ್ದು ಸ್ಪಷ್ಟವಾಗುತ್ತದೆ.

4. ಈ ಜನವಾಸಕ್ಕೆ ಯೋಗ್ಯವಿರುವುದರಿಂದಲೇ ಅಶೋಕನು ದಖ್ಖನ್ ಪ್ರದೇಶದ ಜನಪದವನ್ನಾಗಿ ಸುವರ್ಣಗಿರಿಯನ್ನು ಆಯ್ಕೆ ಮಾಡಿದ್ದು ಮತ್ತು ಮುಂದುವರೆದು ಇಲ್ಲಯೇ ಬೌದ್ಧ ಧರ್ಮದ ಕುರುಹುಗಳನ್ನು ಹೆಚ್ಚಾಗಿ ಈ ಪ್ರದೇಶದಲ್ಲಿಯೇ ಗುರುತಿಸಬಹುದು. ಮತ್ತು ಇಲ್ಲಿ ಇಂದಿಗೂ ವಜ್ರಗಳು ದೊರೆಯುತ್ತಿರುವುದು ಸಹಿತ ಪ್ರಮುಖ ಸಂಪತ್ತಿನಿಂದ ಕೂಡಿದ ಪ್ರದೇಶವೆಂಬುದರಲ್ಲಿ ಸಂದೇಹವಿಲ್ಲ.

5. ಬೌದ್ಧ ಧರ್ಮದ ನಂತರ ಜೈನ ಧರ್ಮವು ಈ ಭಾಗದಲ್ಲಿ ಹೆಚ್ಚಾಗಿ ವಿಸ್ತಾರಗೊಂಡಿದ್ದು ಕುಂದಕುಂದಾಚಾರ್ಯರು ಸಿಂಧನಾಡಿನ ಕೊನಕಂಡ್ಲ ಗ್ರಾಮದಲ್ಲಿರುವುದನ್ನು ವಿದ್ವಾಂಸರು ಈಗಾಗಲೇ ನಿರೂಪಿಸಿದ್ದಾರೆ. ಮತ್ತೊಬ್ಬ ಪ್ರಮುಖ ಜೈನ ಕವಿಯು ಮತ್ತು ಮುನಿಯಾದ ತುಂಬಳೂರಚಾರ್ಯರನ್ನು ಆದವಾನಿಯ ತುಂಬುಳ ಗ್ರಾಮದವನಿರಬೇಕೆಂದು ಎಂ.ಎಂ.ಕಲಬುರ್ಗಿಯವರ ತಮ್ಮ ಕವಿರಾಜಮಾರ್ಗದ ಪರಿಸರದ ಸಾಹಿತ್ಯ ಕೃತಿಯಲ್ಲಿ ಚರ್ಚಿಸಿದ್ದಾರೆ.

6. ಇಲ್ಲಿಯ ಶ್ರೀ ಪರ್ವತವು ಅಂದಿನ ಪಲ್ಲವ ಚೋಳ ಕದಂಬ ರಾಜವಂಶಗಳ ಕದನ ಪ್ರದೇಶವಾಗಿ ಮಾರ್ಪಟ್ಟಿದ್ದು ಶಾಸನಗಳ ಮೂಲಕ ಅರಿಯಬಹುದಾಗಿದೆ. ಏಕೆಂದರೆ ಇಲ್ಲಿನ ಸಂಪದ್ಭರಿತ ಮತ್ತು ಪ್ರಾಚೀನ ಪ್ರದೇಶವಾದ್ದರಿಂದಲೇ ಎನ್ನವುದು ಸ್ಪಷ್ಟ.

ಈ ಎಲ್ಲಾ ಆಂಶಗಳಿಂದ ಈ ಪ್ರದೇಶವು ಪೂರ್ವದಿಂದಲೂ ವಿಶಿಷ್ಟವಾದ ಅಂಶಗಳನ್ನು ಒಳಗೊಂಡಿರುವುದರಿಂದಲೇ ಶಾತವಾಹನರು ಶಾತವಾಹನ ವಿಹಾರದ ಅಥವಾ ಶಾತವಾಹನರಟ್ಟವನ್ನು ಒಳಗೊಂಡ ಕುಂತಲ ಪ್ರದೇಶದ ಸುವರ್ಣಗಿರಿಯ ಮೂಲದವರೆಂದು ಸ್ಪಷ್ಟವಾಗುತ್ತದೆ.

**ಕೊನೆಟಿಪ್ಪಣಿಗಳು**


1. ಸಾಯಿಬಾಬು ಬಂಡ್ಲ (ಸಂ), 2009, ಆಂದ್ರಪ್ರದೇಶ್ ಸಾಮಾಜಿಕ ಸಾಂಸ್ಕೃತಿಕ ಚರಿತ್ರೆ, ಬಂಡ್ಲ ಪಬ್ಲಿಕೇಷನ್ ಹೈದರಾಬಾದ್ ಪು.ಸಂ 25
2. ಸಾಯಿಬಾಬು ಬಂಡ್ಲ (ಸಂ), 2009, ಆಂದ್ರಪ್ರದೇಶ್ ಸಾಮಾಜಿಕ ಸಾಂಸ್ಕೃತಿಕ ಚರಿತ್ರೆ, ಬಂಡ್ಲ ಪಬ್ಲಿಕೇಷನ್ ಹೈದರಾಬಾದ್ ಪು.ಸಂ 25
3. ಸಾಯಿಬಾಬು ಬಂಡ್ಲ (ಸಂ), 2009, ಆಂದ್ರಪ್ರದೇಶ್ ಸಾಮಾಜಿಕ ಸಾಂಸ್ಕೃತಿಕ ಚರಿತ್ರೆ, ಬಂಡ್ಲ ಪಬ್ಲಿಕೇಷನ್ ಹೈದರಾಬಾದ್ ಪು.ಸಂ 26
4. ಡಾ.ಸುಭ್ರಹ್ಮಣ್ಯ ರಾಯಪ್ರೋಲು, 1975, ಅಶೋಕನ ಎರ್ರಗುಡಿ ಶಾಸನಗಳು, ಆಂದ್ರಪ್ರದೇಶ್ ಪುರಾವಸ್ತು ಶಾಖೆ ಪ್ರಕಟಣೆ, ಹೈದರಾಬಾದ್, ಪು.ಸಂ 29
5. ಸುಭ್ರಹ್ಮಣ್ಯ ರಾಯಪ್ರೋಲು, 1975, ಅಶೋಕನ ಎರ್ರಗುಡಿ ಶಾಸನಗಳು ಆಂದ್ರಪ್ರದೇಶ್ ಪುರಾವಸ್ತು ಶಾಖೆ ಪ್ರಕಟಣೆ, ಹೈದರಾಬಾದ್, ಪು.ಸಂ 8

6. ಥಾಮಸ್ ಎಫ್.ಡಬ್ಲ್ಯೂ, 1917–18, ಎಪಿಗ್ರಾಫಿಕಾ ಇಂಡಿಕಾ ಸಂಪುಟ–14, ಬ್ರಿಟಿಷ್ ಇಂಡಿಯಾ ಪ್ರೆಸ್, ಬೊಂಬಾಯಿ. ಪು.ಸಂ 155
7. ಕೆ.ಆರ್ ಗಣೇಶ, ಶೇಷಶಾಸ್ತ್ರಿ ಆರ್, 2001, ಆಂಧ್ರ ಪ್ರದೇಶ ಕನ್ನಡ ಶಾಸನಗಳು ಸಂಪುಟ1, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.ಸಂ.346–347

**ಆಧಾರ ಗ್ರಂಥಗಳು.**

1. ಪ್ರಾಚೀನ ಭಾರತದೇಶ ಚರಿತ್ರೆ – ಸಂ:ವಲ್ಲಂಪಾಟಿ ವೆಂಕಟ ಸುಬ್ಬಯ್ಯ
2. ಆಂಧ್ರರ ಚರಿತ್ರೆ – ಡಾ.ನೆಲಟೂರಿ ವೆಂಕಟರಮಣರಾವು
3. ಆಂಧ್ರಪ್ರದೇಶ್ ಸಮಗ್ರ ಚರಿತ್ರೆ ಸಂಸ್ಕೃತಿ ಸಂಪುಟಗಳು 1,2,3 – ಸಂ:ಐ.ಕೆ.ಶರ್ಮ
4. ಕರ್ನಾಟಕ ಚರಿತ್ರೆ (ಚರಿತ್ರೆ ಮಾಲೆ 1)– ಸಂ : ಪ್ರೊ. ಬಿ.ಷೇಕ್ ಅಲಿ, ಪ್ರೊ. ಅ.ಸುಂದರ